ಸ್ವಾತಂತ್ರ್ಯದ ಅಮೃತಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು–560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080–22277396 ಇ–ಮೇಲ್ ವಿಳಾಸ : companysecretarykptcl1@gmail.com

ವಿಷಯ : ಕೇಂದ್ರೀಯ ಖರೀದಿ ಸಮಿತಿಗೆ ರೂ.20 ಕೋಟಿ ವರೆಗಿನ ಕಾಮಗಾರಿಗಳ / ಟೆಂಡರ್‌ಗಳ ಅನುಮೋದನೆಗೆ ನೀಡಿರುವ ಅಧಿಕಾರದ ಬಗ್ಗೆ.

ಉಲ್ಲೇಖ : (1) ಮಾನ್ಯ ಇಂಧನ ಸಚಿವರು ಹಾಗೂ ಕವಿಪ್ರನಿನಿ ನಿರ್ದೇಶಕರ ಮಂಡಳಿಯ ಅಧ್ಯಕ್ಷರು ರವರ ಟಿಪ್ಪಣಿ ಸಂಖ್ಯೆ: ಇಸ/108/2023 ದಿನಾಂಕ: 23/08/2023.

(2) ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋಸಲ್ಪಟ್ಟಿರುವ ಟಿಪ್ಪಣಿ ಸಂಖ್ಯೆ: ಕವಿಪ್ರನಿನಿ/ವ್ಯನಿ/ಹಿಆಕಾ/61 ದಿನಾಂಕ: 20/09/2023 (ಮಾನ್ಯ ಇಂಧನ ಸಚಿವರಿಂದ ಅನುಮೋದಿಸಲ್ಪಟ್ಟಿದೆ).

*****

ಕೇಂದ್ರೀಯ ಖರೀದಿ ಸಮಿತಿ (CPC) ಯು ಕವಿಪ್ರನಿನಿಯ ನಿರ್ದೇಶಕರ ಮಂಡಳಿಯ ಉಪ ಸಮಿತಿಯಾಗಿರುತ್ತದೆ. ಮಂಡಳಿ ಸಭೆಯಲ್ಲಿ ರೂ.20 ಕೋಟಿಗಿಂತ ಕಡಿಮೆ ಮೊತ್ತದ ಎಲ್ಲಾ ಟೆಂಡರ್‌ಗಳನ್ನು ವಿಸ್ತೃತವಾಗಿ ಚರ್ಚಿಸುವುದು ಕಷ್ಟಸಾಧ್ಯವಾಗುವುದರಿಂದ ಹಾಗೂ ಮಂಡಳಿ ಸಭೆಗಳು ಕಾಲ–ಕಾಲಕ್ಕೆ ನಡೆಯದೇ ಇರುವುದರಿಂದ, ಮಂಡಳಿಯು ಕೇಂದ್ರೀಯ ಖರೀದಿ ಸಮಿತಿ (CPC)ಗೆ ಕವಿಪ್ರನಿನಿಯ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ37/SA3/5760/99–2000 ದಿನಾಂಕ: 18/10/2005 ರನ್ವಯ ರೂ.20 ಕೋಟಿಗಿಂತ ಕಡಿಮೆ ಮೊತ್ತದ ಕಾಮಗಾರಿಗಳಿಗೆ / ಟೆಂಡರ್‌ಗಳಿಗೆ ವಿಸ್ತೃತವಾಗಿ ಚರ್ಚಿಸಿ ಅನುಮೋದನೆ ನೀಡಲು ಅಧಿಕಾರ ನೀಡಿರುತ್ತದೆ.

ಮುಂದುವರಿದು, ಆಡಳಿತಾತ್ಮಕ ಹಿತದೃಷ್ಟಿಯಿಂದ ಕೇಂದ್ರೀಯ ಖರೀದಿ ಸಮಿತಿ (CPC)ಯಲ್ಲಿ ಅನುಮೋದನೆ ನೀಡುವ ಕಾಮಗಾರಿಗಳಿಗೆ / ಟೆಂಡರ್‌ಗಳಿಗೆ ಕವಿಪ್ರನಿನಿ ನಿರ್ದೇಶಕರ ಮಂಡಳಿಯ ಅನುಮೋದನೆಯ ನಂತರ ಕಾರ್ಯಾದೇಶ (LOI/DWA/PO)ಗಳನ್ನು ಹೊರಡಿಸುವುದು ಸೂಕ್ತವೆಂದು ಕವಿಪ್ರನಿನಿ ನಿರ್ದೇಶಕರ ಮಂಡಳಿಯ ಅಧ್ಯಕ್ಷರು ಆದ ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ ರವರು ನಿರ್ದೇಶನ ನೀಡಿರುತ್ತಾರೆ ಹಾಗೂ ಒಂದು ವೇಳೆ ಕೆಲವು ಕಾಮಗಾರಿಗಳನ್ನು / ಟೆಂಡರ್‌ಗಳನ್ನು ಅತೀ ತುರ್ತಾಗಿ ಕೈಗೊಳ್ಳಬೇಕೆಂದು CPC ಸಭೆಯು ತೀರ್ಮಾನಿಸಿದ್ದಲ್ಲಿ, ಅಂತಹ ಕಾಮಗಾರಿಗಳಿಗೆ / ಟೆಂಡರ್‌ಗಳಿಗೆ ಅಧ್ಯಕ್ಷರು, ಕವಿಪ್ರನಿನಿ ರವರ ಅನುಮೋದನೆ ಪಡೆದು ಕಾರ್ಯಾದೇಶ (LOI/DWA/PO)ಗಳನ್ನು ಹೊರಡಿಸಿ, ನಂತರ ನಿರ್ದೇಶಕರ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯಲು ಸೂಚಿಸಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ ಸಂಖ್ಯೆ : ಕವಿಪ್ರನಿನಿ/ಕಂ.ಕಾ/ಬಿ37/33221/2012–13** **ದಿನಾಂಕ : 27–09–2023**

ಮೇಲ್ಕಂಡಂತೆ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೇಂದ್ರೀಯ ಖರೀದಿ ಸಮಿತಿ (CPC)ಯು ಅನುಮೋದನೆ ನೀಡುವ ಕಾಮಗಾರಿಗಳಲ್ಲಿ / ಟೆಂಡರ್‌ಗಳಲ್ಲಿ ಈ ಕೆಳಕಂಡಂತೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

1) ಕವಿಪ್ರನಿನಿ ನಿರ್ದೇಶಕರ ಮಂಡಳಿಯ ಅನುಮೋದನೆಯ ನಂತರ ಕಾರ್ಯಾದೇಶ (LOI/DWA/PO)ಗಳನ್ನು ಹೊರಡಿಸುವುದು.

2) ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದು ಕೇಂದ್ರೀಯ ಖರೀದಿ ಸಮಿತಿ (CPC)ಯು ತೀರ್ಮಾನಿಸಿದ್ದಲ್ಲಿ ಅಂತಹ ಕಾಮಗಾರಿಗಳಿಗೆ / ಟೆಂಡರ್‌ಗಳಿಗೆ ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ, ಹಾಗೂ ಅಧ್ಯಕ್ಷರು, ಕವಿಪ್ರನಿನಿ ರವರ ಅನುಮೋದನೆ ಪಡೆದು ಕಾರ್ಯಾದೇಶ (LOI/DWA/PO)ಗಳನ್ನು ಹೊರಡಿಸಿ, ನಂತರ ನಿರ್ದೇಶಕರ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವುದು.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ.

ಆದೇಶದ ಮೇರೆಗೆ,

Ramya.K 27/9/23

ಕಂಪನಿ ಕಾರ್ಯದರ್ಶಿ
ಕವಿಪ್ರನಿನಿ

ಗೆ

1) ಮಾನ್ಯ ಇಂಧನ ಸಚಿವರು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
3) ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ / ಆಂತರಿಕ ಪರಿಶೋಧನೆ) ಕವಿಪ್ರನಿನಿ, ಬೆಂಗಳೂರು.
4) ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಕವಿಪ್ರನಿನಿ, ಬೆಂಗಳೂರು.
5) ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕಾಮಗಾರಿ / ನಿರ್ವಹಣೆ / ಕಾ ಮತ್ತು ನಿ, ಕವಿಪ್ರನಿನಿ.
6) ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7) ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಕಾಮಗಾರಿ / ಟಿಎಲ್ & ಎಸ್‌ಎಸ್ ವಿಭಾಗಗಳು, ಕವಿಪ್ರನಿನಿ.
8) ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9) ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಪ್ರಸರಣ), ನಿರ್ದೇಶಕರು (ಹಣಕಾಸು), ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಕವಿಪ್ರನಿನಿ ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.

ಪ್ರತಿಯನ್ನು:

ಅಧೀಕ್ಷಕ ಇಂಜಿನಿಯರ್ (ವಿ), (ಐ.ಟಿ), ಕವಿಪ್ರನಿನಿ ರವರಿಗೆ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡಲು.